## ಸರ್ಕಾರಿ ಪ್ರೌಢ ಶಾಲೆ ಬೇಗೂರು ,ಬೆಂಗಳೂರು -೬೮

## ವಾರ್ಷಿಕ ಪರೀಕ್ಷೆ ೨೦೧೪-೧೫

**ತರಗತಿ : ೯ ನೇ ಪ್ರಥಮಭಾಷೆ (ಕನ್ನಡ) ಅಂಕಗಳು : ೯೦**

**ಭಾಗ -ಎ**

**ಪಠ್ಯಗಳ ಅಧ್ಯಯನ (ಗದ್ಯ,ಪದ್ಯ, ಪೋಷಕ ಅಧ್ಯಯನ ) ೬೧ ಅಂಕಗಳು**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 10x1=10**

೧. ಯಮದಂಡ -ವಿದ್ಯುಚ್ಚೋರ ಇಂದ್ರೋಪವನಕ್ಕೆ ಏಕೆ ಹೋದರು?

೨. ಗಿರಿಜೆ ಎಲ್ಲಿ ಇರಬೇಕೆಂದು ಶಿವನು ತಿಳಿಸಿದನು ?

೩. ಮಾಲಗತ್ತಿಯವರ ಓದಿನ ಆತ್ಮೀಯ ಸ್ಥಳ ಯಾವುದು ?

೪. ಮಾರಿದತ್ತ ಪಟ್ಟವನ್ನು ಯಾರಿಗೆ ಕಟ್ಟಿದನು ?

೫. ಕಡಿದೊಗೆಯಬೇಕಾದ ಪಾಶಗಳು ಯಾವುವು ?

೬. ಬನದಮ್ಮನಹಳ್ಳಿಯ ದೇವಾಲಯದ ಮುಂದೆ ಯಾವ ವಿಚಾರವಾಗಿ ಚರ್ಚೆ ನಡೆದಿತ್ತು ?

೭. ಪರದೆ ಮೇಲೇಳುತ್ತಿದ್ದಂತೆ ರಾಜ ಹೇಳಿದುದು ಏನು ?

೮.ಅಜ್ಞಾತ ಲೋಕದಲ್ಲಿ ಕಾದು ಕುಳಿತಿರುವವರು ಯಾರು ?

೯. ಹೆಣ್ಣುಮಕ್ಕಳು ಶಾಲೆಯನ್ನು ತೊರೆಯಲು ಇರುವ ಕಾರಣಗಳಾವುವು ?

೧೦. ಗೀತೆಯನ್ನು ಹಾಡುತ್ತಾ ಪುಟ್ಟಹಕ್ಕಿ ಯಾರನ್ನು ಸ್ವಾಗತಿಸುತ್ತದೆ ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8x2=16**

೧೧. ಮೀರಾಬಾಯಿ ದೇವಾಲಯದ ಸೌಂದರ್ಯವನ್ನು ವಿವರಿಸಿ.

೧೨.ಜಂತ್ರಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

mamatabhagwat1@gmail.com

೧೩.ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.

೧೪. ರಾಧಾಕೃಷ್ಣನ್ ಅವರ ವಿದ್ಯಾಭ್ಯಾಸ ಎಲ್ಲೆಲ್ಲಿ ನಡೆಯಿತು ?

೧೫. ನಡುಮಗ ಘಟೋತ್ಕಚನ ರೂಪವನ್ನು ಹೇಗೆ ವರ್ಣಿಸಿದ ?

೧೬.ರಕ್ಷಣೆಯ ವಿಷಯದಲ್ಲಿ ಪಾಂಡವರ ನಿಲುವು ಏನು ?

೧೭. ಪದ್ಮಾವತಿ ಗುಡ್ಡದಿಂದ ಮಾಲಗತ್ತಿಯವರು ಗಾಬರಿಯಿಂದ ಓಡಿಬರಲು ಕಾರಣವೇನು ?

೧೮.ಕವಿ ಎಂತಹ ಹಾಡು ಗುಡುಗಬೇಕು ಎಂದು ಆಶಿಸುತ್ತಾನೆ ?

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 3x3=9**

೧೯. ''ಮುನ್ನೀತನ ಪೇಳ್ದುದುಮೋಲೆಯ ಮಾತುಮೊಂದಾದುದು ''

೨೦.''ನಿಮ್ಮಂತಹ ಎಷ್ಟೋ ಜನರೊಡನೆ ಗುದ್ದಾಡಿ ಪಳಗಿದವನು ನಾನು ''

೨೧. ''ದೇವನೆ ಆದಂ ''

**ಈ ಸಾಹಿತಿಗಳ ಸ್ಥಳ ,ಕಾಲ,ಕೃತಿಗಳನ್ನು ಕುರಿತು ಬರೆಯಿರಿ . 2x3=6**

೨೨. ಹರಿಹರ

೨೩.ಮಧುರಚೆನ್ನ

**೨೪. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ. 1x4=4**

ಪುರುಪರಮೇಶನ … .............

…...................................

…....................................

…......................ಹೇಳಲಳವೇ

**ಅಥವಾ**

ನವರತ್ನ …...................

…................................

…...............................

…................ವಂದದೊಳು .

mamatabhagwat1@gmail.com

**೨೫.ಈ ಕೆಳಗಿನ ಪದ್ಯಭಾಗವನ್ನು ಓದಿಕೊಂಡು ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. 4x1=4**

ಬಿದಿರು ನಾ ಯಾರಿಗಲ್ಲದವಳು

ಹುಟ್ಟುತ ಹುಲ್ಲು ನಾನಾದೆ

ಬೆಳೆಬೆಳೆಯುತ್ತ ದಿವಿನಾದೆ

ಮಕ್ಕಳನು ತೂಗುವ ತೊಟ್ಟಿಲಾದೆ

ಪಲ್ಲಕ್ಕಿ ದಂಡಿಗೆಯಾದೆ

ಪತ್ರೆಗೆ ಬುಟ್ಟಿ ತಾನಾದೆ

ಮಹಾತ್ಮರ ಕೈಗೆ ಬೆತ್ತ ನಾನಾದೆ

ಪ್ರಶ್ನೆಗಳು :

೧. ಈ ಪದ್ಯಭಾಗದಲ್ಲಿ ನೀವು ಮೆಚ್ಚುವ ಸಾಲುಗಳು ಯಾವುವು ?

೨. ಈ ಸಾಲುಗಳನ್ನು ನೀವು ಮೆಚ್ಚಲು ಕಾರಣವೇನು ?

೩. ಹುಲ್ಲಾಗಿ ಹುಟ್ಟಿದ ಬಿದಿರು ಬೆಳೆಯುತ್ತ ಏನಾಯಿತು ?

೪. ಮಹಾತ್ಮರಿಗೆ ಬಿದಿರು ಹೇಗೆ ಉಪಯುಕ್ತವಾಗಿದೆ ?

**ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯದಲ್ಲಿ ಉತ್ತರ ಬರೆಯಿರಿ. 2x4=8**

೨೬. ಜಿಗಣೆ ಚಿಕಿತ್ಸೆಯನ್ನು ಅನಾರೋಗ್ಯದ ಯಾವ್ಯಾವ ಸಂದರ್ಭಗಳಲ್ಲಿ ಬಳಸಬಹುದು ?

**ಅಥವಾ**

ಬಂಗೂ ಯಾರು ? ಅವನ ಚಿಕಿತ್ಸಾ ವಿಧಾನವನ್ನು ವಿವರಿಸಿ.

೨೭. ಕನ್ನಡ ನಾಡಿನ ಸಿರಿ ಸೊಬಗನ್ನು ಕವಿ ಹೇಗೆ ವರ್ಣಿಸಿದ್ದಾರೆ ?

**ಅಥವಾ**

ವಿಶ್ವಾಮಿತ್ರನ ಆಶ್ರಮ ಪ್ರದೇಶಕ್ಕೆ ಕಾಲಿಟ್ಟ ಅನಂತರ ಹರಿಶ್ಚಂದ್ರ ಎದುರಿಸಿದ ಸಂಕಷ್ಟಗಳನ್ನು ವಿವರಿಸಿ.

೨೮. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 2x2=4

ಯಕ್ಷಗಾನದಲ್ಲಿ ಬರುವ ಪ್ರಸಂಗಗಳಲ್ಲಿ ಕೃಷ್ಣಾರ್ಜುನ ಕಾಳಗ ,ಕರ್ಣಾರ್ಜುನ ಕಾಳಗ ,ಬಭ್ರುವಾಹನ ಕಾಳಗ ,ಸುಧನ್ವಾರ್ಜುನ ಕಾಳಗ ಮೊದಲಾದವು ವೀರರಸ ಪ್ರಧಾನವಾದವುಗಳು .ಚಂದ್ರಾವಳಿ ವಿಲಾಸ ,ರತಿಕಲ್ಯಾಣ,ರತ್ನಾವತಿಕಲ್ಯಾಣ ಮೊದಲಾದವು ಶೃಂಗಾರ ರಸ ಪ್ರಧಾನ ಪ್ರಸಂಗಗಳು .ಇವಲ್ಲದೆ ಪ್ರಸಿದ್ಧ ಕ್ಷೇತ್ರಗಳ ಕ್ಷೇತ್ರಮಹಾತ್ಮೆಗಳಿವೆ.ಯಕ್ಷಗಾನದ ಎಲ್ಲ ಪ್ರಸಂಗಗಳಲ್ಲೂ ಹಾಸ್ಯ ಕಂಡುಬರುತ್ತದೆ .ವಿಡಂಬನೆ ಕೂಡ ಹಾಸ್ಯದ ಒಂದು ಅಂಗ .ಅದರಲ್ಲಿ ಹನುಮನಾಯಕ ,ಕುಬ್ಜೆ,ಚಾರಕ,ವನಪಾಲಕ ಮೊದಲಾದ ಪಾತ್ರಗಳಲ್ಲಿ ಹಾಸ್ಯ ಕಾಣಿಸಿಕೊಳ್ಳುವುದು .

ಯಕ್ಷಗಾನದಲ್ಲಿ ತುಂಬ ಕಲಾತ್ಮಕವಾದದ್ದು ಬಣ್ಣದ ವೇಷ .ಇಂತಹ ಬೃಹತ್ ವೇಷಗಳು ಸಾಮಾನ್ಯವಾಗಿ ಬರುವುದು ನಡುರಾತ್ರಿಯಲ್ಲಿ .ರಾಕ್ಷಸ ವೇಷಗಳು ಒಮ್ಮೊಮ್ಮೆ ಪ್ರೇಕ್ಷಕರ ಮಧ್ಯದಿಂದ ರಂಗ ಪ್ರವೇಶಿಸುವುದುಂಟು .ಈ ಪಾತ್ರ ಪ್ರವೇಶಿಸುವಾಗ ಎರಡು ಬದಿಗೆ ದೀವಟಿಗೆಗಳನ್ನು ಹಿಡಿದು ,ರಾಳದ ಪುಡಿಯನ್ನು ಎರಚಿ ಜ್ವಾಲೆ ಎಬ್ಬಿಸಿ ಭಯಾನಕ ವಾತಾವರಣವನ್ನು ಸೃಷ್ಟಿಸುತ್ತಾರೆ .ಚಂಡೆಯ ಬಡಿತ ,ರಾಕ್ಷಸರ ಕೂಗು ಅರೆನಿದ್ರೆಯಲ್ಲಿರುವ ಪ್ರೇಕ್ಷಕರನ್ನು ಬಡಿದೆಬ್ಬಿಸುತ್ತದೆ .ಪ್ರಧಾನ ಪಾತ್ರಗಳು ಭಾಗವತರ ಮೂಲಕ ತಮ್ಮ ಪರಿಚಯವನ್ನು ಮಾಡಿಕೊಳ್ಳುತ್ತವೆ.

ಪ್ರಶ್ನೆಗಳು :

೧. ಯಕ್ಷಗಾನದಲ್ಲಿ ಬರುವ ಪ್ರಮುಖ ಪ್ರಸಂಗಗಳು ಯಾವುವು ?

೨. ಯಕ್ಷಗಾನದ ಬಣ್ಣದ ವೇಷದ ಕುರಿತು ಬರೆಯಿರಿ .

## ಭಾಗ - ಬಿ

ಅನ್ವಯಿಕ ವ್ಯಾಕರಣ ,ಅಲಂಕಾರ,ಛಂದಸ್ಸು - ೧೮ ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ,ಉತ್ತರಕ್ಕಾಗಿಯೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

೨೯. ಕನ್ನಡ ವರ್ಣಮಾಲೆಯಲ್ಲಿ ಈ ಅಕ್ಷರಗಳನ್ನುಸಂಧ್ಯಕ್ಷರಗಳು ಎಂದು ಗುರುತಿಸುತ್ತಾರೆ .

ಎ)ಅ,ಆ ಬಿ)ಇ,ಈ ಸಿ) ಎ,ಏ ಡಿ)ಐ,ಔ

೩೦. 'ಗುಡಿಗೋಪುರ ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.

ಎ.)ನುಡಿಗಟ್ಟು ಬಿ)ಜೋಡುನುಡಿ ಸಿ)ಅನುಕರಣಾವ್ಯಯ ಡಿ)ದ್ವಿರುಕ್ತಿ

೩೧. 'ಹರ್ಷ' ಪದದ ತದ್ಭವ ರೂಪ -----

ಎ) ಸಂತಸ ಬಿ)ಹರುಷ ಸಿ)ಹರ್ಷಾ ಡಿ)ಸಂತೋಷ

೩೨.'ಹೋಗುತ್ತಾನೆ' ಈ ಕ್ರಿಯಾಪದದ ಭೂತಕಾಲದ ರೂಪವಿದು ....

ಎ)ಹೋದನು ಬಿ)ಹೋಗುವನು ಸಿ)ಹೋಗುತ್ತೇನೆ ಡಿ)ಹೋದರು

೩೩. 'ಪಿತ್ತನೆತ್ತಿಗೇರು' ಪದದ ವ್ಯಾಕರಣ ವಿಶೇಷವಿದು.......

ಎ) ಜೋಡುನುಡಿ ಬಿ ) ದ್ವಿರುಕ್ತಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೩೪. 'ಈ ಕೇರಿ ' ಪದವು ಈ ಸಮಾಸಕ್ಕೆ ಉದಾರಣೆಯಾಗಿದೆ.

ಎ)ಕರ್ಮಧಾರಯ ಸಮಾಸ ಬಿ)ದ್ವಿಗು ಸಮಾಸ ಸಿ)ದ್ವಂದ್ವ ಸಮಾಸ ಡಿ)ಗಮಕ ಸಮಾಸ

೩೫. 'ಹಿಂಗ' ಪದದ ಗ್ರಾಂಥಿಕ ರೂಪವಿದು ----

ಎ) ಹೀಗೆ ಬಿ)ಹೀಂಗ ಸಿ)ಹೀಗ ಡಿ)ಹಾಗೆ

೩೬. 'ಅಕ್ಕ ತಂಗಿಯನ್ನು ಕರೆದಳು ' ಈ ವಾಕ್ಯವನ್ನು ಕರ್ಮಣಿ ರೂಪಕ್ಕೆ ಪರಿವರ್ತಿಸಿದಾಗ ಕ್ರಿಯಾಪದವು ಹೀಗೆ ಬದಲಾಗುವುದು .

ಎ) ಕರೆದಿದ್ದಳು ಬಿ)ಕರೆಯಲ್ಪಟ್ಟಳು ಸಿ)ಕರೆಯುವಳು ಡಿ)ಕರೆದಿದ್ದಾಳೆ.

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದವನ್ನು ಬರೆಯಿರಿ. 4x1=4**

೩೭. ದೊಡ್ಡ ದೊಡ್ಡ:ದ್ವಿರುಕ್ತಿ::ಚುಮುಚುಮು :------

೩೮. ಬರಲಿ :ವಿದ್ಯರ್ಥಕ ::ಬರನು :----

೩೯. ಪಲವು :ಹಲವು :: ಪೋಗಿ :---

೪೦. ಅರಸಂಗೆ :ಚತುರ್ಥಿ : : ಬಾಗಿಲೊಳ್ :----

mamatabhagwat1@gmail.com

**೪೧. ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣವಿಭಾಗಿಸಿ, ಛಂದಸ್ಸಿನ ಹೆಸರು ಬರೆಯಿರಿ. 1x3=3**

ಧುರದೊಳರಿ ಭೂಭುಜರನಂಜಿಸುವ ನಡುಗಿಸುವ

ಕೊರಗಿಸುವ ಕೋಡಿಸುವ ಬಳುಕಿಸುವ ಜಳುಕಿಸುವ

ಬಿರುದಂಕಮಲ್ಲ ನೀ ನಡುಗಲೇತಕ್ಕೆ ಹೇಳೆಂದು ಮೆಲ್ಲನೆ ನುಡಿಸಲು

**ಅಥವಾ**

ಅಲ್ಲಿಗಲ್ಲಿಗೆ ಕಮಲ ಕೊಳಗಳು

ಅಲ್ಲಿಗಲ್ಲಿಗೆ ಹರಿವ ತೊರೆಗಳು

ಅಲ್ಲಿಗಲ್ಲಿಗೆ ಮೆರೆವ ಸುಂದರ ಭವ್ಯ ಕಲ್ಯಾಣಿ

**೪೨.ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ,ಲಕ್ಷಣದೊಂದಿಗೆ ಸಮನ್ವಯಿಸಿ. 1x3=3**

'ನಭಾಂಗಣ '

**ಅಥವಾ**

' ರಾಜರತ್ನ '

**ಭಾಗ -ಸಿ**

**ವಾಕ್ಯ ರಚನೆ ಹಾಗೂ ಬರವಣಿಗೆ ಕೌಶಲ -೧೧ ಅಂಕಗಳು**

**೪೩. ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ . 1x3=3**

* ಬೆಳ್ಳಗಿರುವುದೆಲ್ಲಾ ಹಾಲಲ್ಲ

* ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ

* ಇಬ್ಬರ ಜಗಳ ಮೂರನೆಯವನಿಗೆ ಲಾಭ

**೪೪.**ನಿಮ್ಮನ್ನು ವಿದ್ಯಾವಿಕಾಸ ಪ್ರೌಢಶಾಲೆ , ಹಾವೇರಿ ಯಲ್ಲಿ ಓದುತ್ತಿರುವ ಸಂಕೇತ್ /ಶ್ರೇಯ ಎಂದು ಭಾವಿಸಿ,ಉಡುಪಿಯ ನವಚೈತನ್ಯ ಪ್ರೌಢಶಾಲೆಯಲ್ಲಿ ಓದುತ್ತಿರುವ ನಿಮ್ಮ ಗೆಳೆಯ /ಗೆಳತಿ (ಚಂದನ್ /ಪ್ರಗತಿ)ಗೆ ನಿಮ್ಮ ಶಾಲೆಯಲ್ಲಿ ಆಚರಿಸಿದ ಗಣರಾಜ್ಯೋತ್ಸವದ ಕುರಿತು ಪತ್ರ ಬರೆಯಿರಿ.

ಅಥವಾ

ಪಕ್ಕದ ಊರಿನ ಜಾತ್ರೆಗೆ ಹೋಗುವ ಸಲುವಾಗಿ ಎರಡು ದಿನಗಳ ರಜೆ ನೀಡುವಂತೆ ಕೋರಿ ನಿಮ್ಮ ವರ್ಗಶಿಕ್ಷಕರಿಗೆ ರಜಾ ಅರ್ಜಿ ಬರೆಯಿರಿ.

**1x4 =4**

**೪೫.**ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಪ್ರಬಂಧ ಬರೆಯಿರಿ

**1x4=4**

* ವೃತ್ತ ಪತ್ರಿಕೆ

*ದೂರದರ್ಶನ

* ಜಾಗತಿಕ ತಾಪಮಾನದ ಏರಿಕೆ

ಮುಕ್ತಾಯ

mamatabhagwat1@gmail.com